# ಟೆಲಿಗ್ರಾಂ ಗುಂಪಿನಲ್ಲಿ KRP ಯವರು ಮಾಡಬೇಕಾದ ಕಾರ್ಯಗಳು

- ತಮಗೆ ಮ್ಯಾಪ್ ಆದ ಶಿಕ್ಷಕರೆಲ್ಲಾ ತಮ್ಮ ಟೆಲಿಗ್ರಾಂ ಗುಂಪಿನಲ್ಲಿ ಇದ್ದಾರೆೊ, ಇಲ್ಲವೊ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
- ಟೆಲಿಗ್ರಾಂ ಗುಂಪಿಗೆ ಸೇರದೆ ಇರುವ ಶಿಕ್ಷಕರನ್ನು, ಗುಂಪಿಗೆ ಸೇರಿಸಲು ಕ್ರಮವಹಿಸುವುದು.
- ನಿರ್ದಿಷ್ಟ (ನಿಗದಿತ) ಸಮಯದಲ್ಲಿ ಎಲ್ಲಾ ಶಿಕ್ಷಕರು ಕೋರ್ಸ್‌ನ್ನು ಅಯ್ಕೆ ಮಾಡಿಕೊಂಡಿದ್ದಾರೊ, ಇಲ್ಲವೋ ಗಮನಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಲು ಸಹಾಯ ಮಾಡಬೇಕು.

- ಕೋರ್ಸ್ ಆಯ್ಕೆ ಮಾಡಿಕೊಳ್ಳಲು ಅಥವಾ ಕೋರ್ಸ್ ಅನ್ನು ಪೂರ್ಣಗೊಳಿಸಲು ಅಗತ್ಯವಾದ ತಾಂತ್ರಿಕ ವಿಧಾನ/ ಸಹಾಯವನ್ನು ಶಿಕ್ಷಕರಿಗೆ ತಿಳಿಸಿಕೊಡುವುದು.
- ಕೋರ್ಸ್ ಅನ್ನು ತೆಗೆದುಕೊಂಡಿರುವವರ ಪ್ರಗತಿಯನ್ನು ಪರಿಶೀಲಿಸುತ್ತಿರಬೇಕು. ನಿಗದಿತ ಸಮಯದೊಳಗೆ ಕೋರ್ಸ್ ಅನ್ನು ಪೂರ್ಣಗೊಳಿಸಲು ಅವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರಬೇಕು.
- ಕೋರ್ಸ್ ಅನ್ನು ನಿಗದಿತ ಸಮಯಕ್ಕಿಂತಲೂ ಮುಂಚಿತವಾಗಿ ಪೂರ್ಣಗೊಳಿಸಿದ ಶಿಕ್ಷಕರನ್ನು ಗುಂಪಿನಲ್ಲಿ ಅಭಿನಂದಿಸಬೇಕು. ಉಳಿದ ಶಿಕ್ಷಕರನ್ನು ಕೂಡ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಪ್ರೇರೇಪಿಸಬೇಕು.

- ಕೋರ್ಸ್ ಅನ್ನು ತೆಗೆದುಕೊಂಡಿರುವ ಶಿಕ್ಷಕರು ಯಾವುದೇ ಪ್ರಗತಿ ತೋರದೆ ಇದ್ದ ಪಕ್ಷದಲ್ಲಿ **SRPL/District Nodal** ರವರ ಗಮನಕ್ಕೆ ತಂದು ಆ ಶಿಕ್ಷಕರನ್ನು ಪ್ರಗತಿಯೆಡೆಗೆ ಪ್ರೋತ್ಸಾಹಿಸಿ, ಪ್ರೇರೇಪಿಸಬೇಕು.
- ಯಾವೊಬ್ಬ ಶಿಕ್ಷಕರೂ ಕೋರ್ಸ್‌ನಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು.
- ವಾರಕ್ಕೊಮ್ಮೆಯಾದರೂ ಮಾಡ್ಯೂಲ್‌ವಾರು ಪ್ರಗತಿ ಪರಿಶೀಲಿಸಲು ಸಾಮಾಜಿಕ ಸಂದೇಶದ ಆಪ್‌ಗಳ(**Google MEET/Zoom meeting/webinar/Free conference call)** ಮೂಲಕ ಸಭೆಗಳನ್ನು ಸೇರುವುದು.(15 ರಿಂದ 20 ನಿಮಿಷಗಳು)

- ಮಾಡ್ಯೂಲ್‌ಗೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಗುಂಪಿನಲ್ಲಿ ಹಂಚಿಕೊಳ್ಳಬಾರದು.
- ಮಾಡ್ಯೂಲ್‌ನ ಪ್ರಶ್ನೋತರಗಳಿಗೆ ಸಂಬಂಧಿಸಿದ ಬ್ಲಾಗ್‌ಗಳನ್ನು ಗುಂಪಿನಲ್ಲಿ ಪರಿಚಯಿಸುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
- ಶಿಕ್ಷಕರು ಆಯ್ಕೆ ಮಾಡಿಕೊಂಡ ಕೋರ್ಸ್‌ಗಳನ್ನು ಅವರ ವಿನಹ ಬೇರೆ ವಿಧಾನದಿಂದ ಕೋರ್ಸ್‌ಗಳನ್ನು ಪೂರ್ಣಗೊಳಿಸತಕ್ಕದಲ್ಲ. ವೃತಿಪರತೆಯನ್ನು ಹೆಚ್ಚಿಸಿಕೊಳ್ಳಲು ಸ್ವ-ಆಸಕ್ತಿಯಿಂದ ಎಲ್ಲಾ ಶಿಕ್ಷಕರು ಕಲಿಕೆಯಲ್ಲಿ ಪಾಲ್ಗೊಳ್ಳುವಂತಹುದು.